ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ **147/2018**

ದಿನಾಂಕ **03.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-1

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಪಿ.ಎಸ್.ಎಂ ವಕೀಲರಿಂದಃ

ಸಣ್ಣ ಸಿದ್ದಪ್ಪನಿಗೆ 4 ಜನ ಮಕ್ಕಳು, ಅವರ ಹೆಸರು ಶಿವಮ್ಮ, ಕರಿಯಣ್ಣ, ಲಕ್ಷ್ಮೀದೇವಿ, ರವಿಕುಮಾರ್. ಕರಿಯಣ್ಣ ಈಗ ತೀರಿಕೊಂಡಿದಾರೆ. ಕರಿಯಣ್ಣ ನನ್ನ ಗಂಡ. ದಾವಾ ಸ್ವತ್ತು ಸಿ.ಕೆ.ಪುರ ಗ್ರಾಮ ಪಂಚಾಯ್ತಿಗೆ ಸೇರಿದ ಆಸ್ತಿ ಎಂದರೆ ಸರಿ. ದಾವಾ ಸ್ವತಿನ ವಿಸ್ತೀರ್ಣ ಪೂರ್ವ-ಪಶ್ಚಿಮಃ30, ಉತ್ತರ-ದಕ್ಷಿಣಃ40 ಅಡಿ. ದಾವಾ ಸ್ವತ್ತು 2 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸಣ್ಣ ಸಿದ್ದಪ್ಪರವರಿಗ ಸೇರಿದ ಜಾಗ. ದಾವಾ ಸ್ವತ್ತಿನಲ್ಲಿ 2 ನೇ ಪ್ರತಿವಾದಿ ಅರ್ಧ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಉಳಿದ ಅರ್ಧ ಖಾಲಿ ಇದೆ ಎಂದರೆ ನಮಗೆ ಸೇರಿದ ಮನೆ ಕಿತ್ತಿದ್ದರಿಂದ ನಾವು ದಾವೆ ಸಲ್ಲಿಸಿದ್ದೇವೆ. 2 ನೇ ಪ್ರತಿವಾದಿ ಮನೆ ಕಟ್ಟುವಾಗ ನಾವು ಅವರಿಗೆ ತೊಂದರೆ ಮಾಡಿದ್ದೇವೆ ಎಂದರೆ ನಮ್ಮ ಮನೆ ಜೆ ಸಿ ಬಿ ಯಿಂದ ಕೆಡವಿದಾಗಲೆ ನಾವು ತಕರಾರು ಮಾಡಿದ್ದೇವೆ. 2 ನೇ ಪ್ರತಿವಾದಿ ಮನೆ ಕೆಡವಿ ಅದೆ ಜಾಗದಲ್ಲಿ ಆರ್.ಸಿ.ಸಿ ಮನೆ ಕಟ್ಟಿದ್ದಾರೆ ಎಂದರೆ ಆರ್.ಸಿ.ಸಿ ಹಾಕಿಲ್ಲ ಸೀಟ್ ಅಳವಡಿಸಿದ್ದಾರೆ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ